ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 15/07/2019

# ಸಚಿವ ಸ್ಥಾನಕ್ಕೆ ಸಿಧು ರಾಜೀನಾಮೆ

**ಚಂಡೀಗಢ:** ಪಂಜಾಬ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಜತೆಗಿನ ವೈಮನಸ್ಸಿನ ಹಿನ್ನೆಲೆಯಲ್ಲಿ ನವಜೋತ್ ಸಿಂಗ್ ಸಿಧು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಪತ್ರವನ್ನು ಪಕ್ಷದ ಅಧ್ಯಕ್ಷ ರಾಹುಲ್ ಗಾಂಧಿಗೆ ಟ್ವೀಟ್ ಮಾಡಿದ್ದಾರೆ. ಸಿಎಂ ಅಮರಿಂದರ್ ಸಿಂಗ್‌ಗೂ ಪತ್ರ ರವಾನಿಸಿರುವುದಾಗಿ ಸಿಧು ಹೇಳಿಕೊಂಡಿದ್ದಾರೆ.

ಸಿಧು ವಿರುದ್ಧ ಅಸಮಾಧಾನಗೊಂಡಿದ್ದ ಅಮರಿಂದರ್ ಸಿಂಗ್,



» **ಪಕ್ಷದ ಅಧ್ಯಕ್ಷರಿಗೆ ಪತ್ರ ಬರೆದ ಪಂಜಾಬ್ ಕೈ ನಾಯಕ**

ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಖಾತೆ ಮರುಹಂಚಿಕೆ ಮಾಡಿದಾಗ ಸಿಧುಗೆ ಪೌರಾಡಳಿತ, ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಇಲಾಖೆ ಬದಲಿಗೆ ಇಂಧನ ಇಲಾಖೆ ನೀಡಿದ್ದರು. ಇದರಿಂದ ಬೇಸರಗೊಂಡಿದ್ದ ಸಿಧು, ಖಾತೆ ಹಂಚಿಕೆಯಾಗಿ ತಿಂಗಳಾದರೂ ಅಧಿಕಾರ ವಹಿಸಿಕೊಂಡಿರಲಿಲ್ಲ.

ಪಂಜಾಬ್ ಕಾಂಗ್ರೆಸ್ ಬೆಳವಣಿಗೆ ಕುರಿತು ರಾಹುಲ್ ಗಾಂಧಿ ಹಾಗೂ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾಗೂ ಪತ್ರ ಬರೆದು, ಭೇಟಿ ಮಾಡಿದ್ದರು. ಆದರೆ, ಹಿಂದಿನ ಖಾತೆ ನೀಡಲು ಅಮರಿಂದರ್ ನಿರಾಕರಿಸಿದ ಹಿನ್ನೆಲೆಯಲ್ಲಿ ಸಿಧು ಬೇಸರಗೊಂಡು ರಾಜೀನಾಮೆ ಸಲ್ಲಿಸಿದ್ದಾರೆ ಎನ್ನಲಾಗಿದೆ. ಏತನ್ಮಧ್ಯೆ, ಲೋಕಸಭಾ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಪಂಜಾಬ್ ಮುಖ್ಯಮಂತ್ರಿಗೆ ಒತ್ತಡ ಹೇರುವ ಸ್ಥಿತಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೂಡ ಇಲ್ಲ.

**ಕ್ಯಾಪ್ಟನ್ ವರ್ಸಸ್ ಸಿಧು:** ಲೋಕಸಭಾ ಚುನಾವಣೆಯಲ್ಲಿ ಚಂಡೀಗಢ ಕ್ಷೇತ್ರದಿಂದ ಪತ್ನಿಗೆ ಟಿಕೆಟ್ ಕೊಡುವಂತೆ ಸಿಧು ಹಠ ಹಿಡಿದಿದ್ದರು. ಆದರೆ, ಸಿಎಂ ಅಮರಿಂದರ್ ಸಿಂಗ್ ಒಪ್ಪದ ಹಿನ್ನೆಲೆಯಲ್ಲಿ ಚುನಾವಣೆ ಪ್ರಚಾರದ ಸಂದರ್ಭದಲ್ಲಿಯೇ ಸಿಧು ಹಾಗೂ ಅವರ ಪತ್ನಿ ಸಿಎಂ ವಿರುದ್ಧ ಬಹಿರಂಗ ಹೇಳಿಕೆ ನೀಡುತ್ತಿದ್ದರು. ಪಕ್ಷ ವಿರೋಧಿ ಹೇಳಿಕೆ ಬಗ್ಗೆ ಎಚ್ಚರಿಕೆ ನೀಡಿದ್ದರೂ ಪ್ರಯೋಜನವಾಗಲಿಲ್ಲ. ಸಿಧು ಹೇಳಿಕೆಯಿಂದ 2-3 ಸೀಟುಗಳಲ್ಲಿ ಕಾಂಗ್ರೆಸ್ ಸೋಲುವಂತಾಯಿತು ಎಂದು ಕೂಡ ಅಮರಿಂದರ್ ಆರೋಪ ಮಾಡಿದ್ದರು. ಆದಾಗ್ಯೂ ರಾಹುಲ್ ಬೆಂಬಲವಿರುವ ಕಾರಣ ಸಿಧುವನ್ನು ಸಂಪುಟದಿಂದ ಹೊರಹಾಕದೇ ಖಾತೆ ಬದಲಾಯಿಸಿದ್ದರು. 'ನನಗೆ ಪಂಜಾಬ್‌ನಲ್ಲಿ ಯಾವುದೇ ಕ್ಯಾಪ್ಟನ್ ಇಲ್ಲ, ರಾಹುಲ್ ಗಾಂಧಿ ಮಾತ್ರ ನನ್ನ ಕ್ಯಾಪ್ಟನ್' ಎಂದು ಸಿಧು ಈ ಹಿಂದೆ ಹೇಳಿದ್ದರು. -ಏಜೆನ್ಸೀಸ್

7